

ನವರಾತ್ರಿ ಆಚರಣೆಯ ಶಕ್ತಿಕೇಂದ್ರ ಮೈಸೂರಿನ
ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇಗುಲ

ಎಲ್ಲ ಕುದುರೆಗಳು, ಆನೆಗಳು ನೊಗ ಹೊತ್ತ ಹೋರಿಗಳು ಅರಮನೆಯ ಮುಂದಿನ ಅಂಗಳದಲ್ಲಿ ಹಾಯ್ದು ಹೋಗುವುವು. ಜಟ್ಟಿಗಳು ಸಾವಿರಾರು ಜನ ಇರುತ್ತಿದ್ದರು. ಇವರಿಗೆ ಕುಸ್ತಿ ಬಿಟ್ಟು ಬೇರೆ ಯಾವುದೇ ಕೆಲಸವಿರಲಿಲ್ಲ. ರಾಜನು ಕುದುರೆಯ ಮೇಲೆ ಕೂತು ಸ್ವಲ್ಪದೂರ ಹೋಗಿ ಬಿಲ್ಲಿಗೆ ಬಾಣ ಹೂಡಿ ಬಿಡುವನು. ಅದು ಯಾವ ಕಡೆ ಹೋಗಿ ಬೀಳುತ್ತಿತ್ತೋ ಆ ದಿಕ್ಕಿನ ರಾಜನ ಮೇಲೆ ದಂಡೆತ್ತಿ ಹೋಗುತ್ತಿದ್ದ. ಅದು ಸಾಮಾನ್ಯವಾಗಿ ಅದಿಲ್ ಷಾಹ್, ಕುತುಬ್ ಷಾಹ್‌ನ ರಾಜ್ಯವಾಗಿರುತ್ತಿತ್ತು'' ಎನ್ನುತ್ತಾನೆ ನ್ಯೂನಿಜ್.

* * *

ವಿಜಯನಗರದ ಪತನದ ನಂತರ ಅಲ್ಲಿಯ ಮಹಾನವಮಿ ಉತ್ಸವ ಕೊನೆಯಾಯಿತು. ಆ ಸಂಪ್ರದಾಯ ಮುಂದೆ 1600ರಿಂದ ಮೈಸೂರು ಸಂಸ್ಥಾನಕ್ಕೆ ವರ್ಗಾವಣೆಯಾಯಿತೆಂದು ವಿದ್ವಾಂಸರು ಹೇಳುತ್ತಾರೆ. ವಿಜಯನಗರದ ಅರಸರ ಉತ್ಸವಕ್ಕೆ ಸಂಬಂಧಪಟ್ಟಂತೆ ಮೇಲೆ ಏನೇನು ವಿವರಗಳನ್ನು ನೀಡಲಾಗಿದೆಯೋ ಅದೆಲ್ಲವೂ ಮೈಸೂರಿನ ರಾಜಮನೆತನಗಳಲ್ಲಿ ನಡೆದುಕೊಂಡು ಬರುವಂತಾಯಿತು. ವಿಜಯನಗರದ ಉತ್ಸವದ ಒಂದು ವಿಶೇಷ ಸಂಗತಿ ಎಂದರೆ ಅರಮನೆಯ ಅಧಿಕಾರಿಗಳು, ಆನೆ ಕುದುರೆಗಳು, ಮಾಂಡಲಿಕರು, ಆಹ್ವಾನಿತ ಪಾಳೆಯಗಾರ ರಾಜ ಮಹಾರಾಜರು, ರಾಣಿಯರು, ದೇವದಾಸಿಯರು ಇವರಿಷ್ಟು ಜನ ಇರುತ್ತಿದ್ದರೆಂದೂ, ಸಾರ್ವಜನಿಕರು ಆ ಆವರಣಕ್ಕೆ ಪ್ರವೇಶಿಸುವುದು ಸಾಧ್ಯವಿರುತ್ತಿರಲಿಲ್ಲ



ದಸರೆಯ ಕೇಂದ್ರಬಿಂದು ಚಾಮುಂಡೇಶ್ವರಿ ದೇವಿ

ಎಂದು ಪ್ರವಾಸಿಗರು ಹೇಳುತ್ತಾರೆ. ಆದರೆ ಮೈಸೂರು ದಸರಾ ಅದು ಆರಂಭವಾದ ಕಾಲದಿಂದ ಇವತ್ತಿನವರೆಗೆ ನಗರದ ಸಾಮಾನ್ಯ ಜನರಿಗೆ ಅರಮನೆಯಿಂದ ಬನ್ನಿಮಂಟಪದವರೆಗೆ ಜಂಬೂಸವಾರಿಯ ಅಲಂಕೃತ ಪ್ರಯಾಣದ ದೃಶ್ಯವನ್ನು ನೋಡುವ ಅವಕಾಶ ಒದಗಿಬಂದಂತೆ ತೋರುತ್ತದೆ. ಇದೇನೆ ಇರಲಿ, ವಿಜಯನಗರದ ಪತನದ ನಂತರ ಕರ್ನಾಟಕದ ಎಲ್ಲ ಭಾಗಗಳ ಪಾಳೆಯಗಾರರು, ಮಾಂಡಲಿಕರು ಸ್ವತಂತ್ರರಾಗುತ್ತ ಅವರ ಆಡಳಿತವು ಕೂಡ ಸಡಿಲವಾಗುತ್ತ ಅದು ಆಂಗ್ಲರ ಪಾಲಾಗುತ್ತ ಬಂದಿತು. ಇದರ ನಡುವೆ ಮೈಸೂರು ಪ್ರಾಂತ್ಯದ ಮಹಾರಾಜರು ಈ ಯುದ್ಧಸಂಬಂಧಿ ಉತ್ಸವ ಆಚರಣೆಯನ್ನು ಆರಂಭಿಸುವಲ್ಲಿ ಅದು ಪ್ರಜಾಪ್ರಭುತ್ವದ ಕಡೆಗೆ ಹೊರಳುತ್ತಿತ್ತು. ಅದರ ಫಲಶ್ರುತಿಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು.

ಮೈಸೂರು ದಸರಾ ಸಂಪೂರ್ಣವಾಗಿ ವಿಜಯನಗರ ಅರಸರ ಉತ್ಸವ ಆಚರಣೆಯ ಅನುಸರಣೆಯೇ ಆದರೂ ಈ ಮೆರವಣಿಗೆಗೆ ಕಾಣಲು ಗ್ರಾಮೀಣ ಪ್ರದೇಶಗಳಿಂದ ಜನ ಬರುತ್ತಿದ್ದರೂ ಇದನ್ನು ತಮ್ಮದೇ ಹಬ್ಬ ಅಥವಾ ತಮ್ಮ ದೈವಸಂಬಂಧಿ ಜಾತ್ರೆ ಎಂಬುದಕ್ಕಿಂತ, ಮೈಸೂರು ಮಹಾರಾಜರ ಅರಮನೆಯ ಜಂಬೂಸವಾರಿಯ ಮನರಂಜನೆ ಎಂದೇ ನೋಡಲು ಬರುತ್ತಿದ್ದರು. ಈ ಮೈಸೂರು ಉತ್ಸವವನ್ನು ದಕ್ಷಿಣ ಕರ್ನಾಟಕದ ಗ್ರಾಮೀಣ ಜನ ನವರಾತ್ರಿ ಉತ್ಸವಕ್ಕೆ ಹೋಗುತ್ತಿದ್ದೇವೆಂದು ಭಾವಿಸುವುದಕ್ಕಿಂತ